ಶ್ರೀ ಎಸ್.ಆರ್. ಬೊಮ್ಮಾಯಿ.—ಸಿ.ಒ.ಡಿ. ವರದಿ ಬಂದಿದೆ, ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ವಿಚಾರ ಪತ್ರಿಕೆಯಲ್ಲಿ ಬಂತು. ಇದರ ಬಗ್ಗೆ ಸಾರ್ವಜನಿಕ ಅಭಿಪ್ರಾಯವೂ ಬಂದ ಮೇಲೆ ಇದನ್ನು ತನಿಖೆ ಮಾಡಲಂ ಸಿ.ಒ.ಡಿ.ಯವರು ಸಾಕಷ್ಟು ಸಮಯ ತೆಗೆದುಕೊಂಡಿದ್ದಾರೆ. ಆದುದರಿಂದ, ಇದರ ಬಗ್ಗೆ ಇನ್ನು ಎಷ್ಟು ದಿವಸದಲ್ಲಿ ಕ್ರಮ ತೆಗೆದು ಕೊಳ್ಳುತ್ತೀರಿ? ಏಕೆಂದರೆ, ಒಂದಂ ಕಡೆ ಶಿಕ್ಷೆ ವಿಧಿಸಿದರೆ ಆದರ ಎಚ್ಚರ ಎಲ್ಲ ಕಡೆ ಆಗುತ್ತದೆ. ಅಲ್ಲದೆ, ಈ ಸಂದರ್ಭದಲ್ಲಿ ನಾನೊಂದು ಸಲಹೆಯನ್ನು ಕೊಡಬಯಸುತ್ತೇನೆ. ಅದೇನೆಂದರೆ, ಯಾವ ಯಾವ ತಾಲ್ಲೂಕುಗಳಲ್ಲಿ ೨೦ ಅಂಶಗಳ ಕಾರ್ಯಕ್ರಮವಾಗಲೀ ಅಥವಾ ಉದ್ಯೋಗ ದೃಢೀಕರಣ ಯೋಜನೆಯಡಿಯಲ್ಲಾಗಲೀ ತೆಗೆದುಕೊಂಡಿರುವ ಕಾರ್ಯಕ್ರಮಗಳ ಪರಿಶೀಲನೆಗಾಗಿ ಶಾಸಕರನ್ನೊಳಗೊಂಡ ಒಂದು ಸಮಿತಿಯನ್ನು ಮಾಡಿದರೆ, ಅವರು ಸ್ಥಳಕ್ಕೆ ಹೋಗಿ ಖುದ್ದು ಪರಿಶೀಲಿಸಿ ಕಾರ್ಯಕ್ರಮಗಳ ಅನುಷ್ಠಾನವನ್ನು ಗಮನಿಸಬಹುದು. ಅದಕ್ಕಾಗಿ ಅಂತಹ ಸಮಿತಿಯೊಂದನ್ನು ರಚನೆ ಮಾಡುವಿರಾ?

ಶ್ರೀ ಎಂ. ವೀರಪ್ಪ ಮೊಯಿಲಿ.—ಉದ್ಯೋಗ ದೃಢೀಕರಣ ಯೋಜನೆಯನ್ನು ೨೦ ಅಂಶಗಳ ಕಾರ್ಯಕ್ರಮದ ಒಂದು ಅಂಶವನ್ನಾಗಿ ತೆಗೆದುಕೊಳ್ಳಲಾಗಿದೆ. We will entrust this work for the supervision by the District 20 point economic programme Committee. That will again exercise the overall supervision of the implementation of the Employment Affirmation Scheme. ಈ ಬಗ್ಗೆ ಈಗಾಗಲೇ ಆದೇಶ ಕೊಡಲಾಗಿದೆ. They are required to review and supervise it. ಇನ್ನು, ಸಿ.ಒ.ಡಿ. ವರದಿ ಬಗ್ಗೆ ಇನ್ನೆಷ್ಟು ದಿವಸದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದೆಂದು ಮಾನ್ಯ ಸದಸ್ಯರಂ ಕೇಳಿದರು. ಆದನ್ನು ಇನ್ನು ೧೫ ದಿವಸದೊಳಗೆ ಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ಕೆ.ಪೆಚ್. ಹನುಮೇಗೌಡ.—ಉದ್ಯೋಗ ದೃಢೀಕರಣ ಯೋಜನೆ ಕೆಳಗಡೆ ತೆಗೆದುಕೊಳ್ಳುವ ಕಾರ್ಯಕ್ರಮಗಳನ್ನು ಕಂಟ್ರಾಕ್ಟರುಗಳಿಗೆ ಕೊಡಬಾರದೆಂದು ಇದ್ದರೂ ಕೆಲವು ಕ್ಷೇತ್ರ ವಿಸ್ತರಣಾಧಿಕಾರಿಗಳು ಅನಧಿಕೃತವಾಗಿ ಕಂಟ್ರಾಕ್ಟರುಗಳಿಗೆ ಕೆಲಸಗಳನ್ನು ಕೊಟ್ಟಿರುತ್ತಾರೆ. ಜೊತೆಗೆ ೬೦೦-೮೦೦ ರೂಪಾಯಿಗಳ ಕೆಲಸವಾಗಿದ್ದರೆ, ಆ ಕೆಲಸಕ್ಕೆ ೭-೮ ಸಾವಿರ ರೂಪಾಯಿಗಳನ್ನು ಬಟವಾಡೆ ಮಾಡಿದ್ದಾರೆ. ಯಾರ್ಯಾರೋ ಕೈಯಲ್ಲಿ ಹೆಬ್ಬೆಟ್ಟಿನ್ನು ಒತ್ತಿಸಿಕೊಂಡು ಈ ರೀತಿ ಮಾಡಿದ್ದಾರೆ. ಇಂತಹ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಏನು ಕ್ರಮ ಕೈಗೊಳ್ಳುತ್ತೀರಿ?

SRI M. VEERAPPA MOILY.—Unless we are vigilant about these programmes which are taking place in our constitueencies or taluks we may not be in a position to solve them. ಯಾವ ಯಾವ ತಾಲ್ಲೂಕಿನಲ್ಲಿ ಈ ರೀತಿಯ ಪ್ರಕರಣಗಳು ನಡೆಯುತ್ತಿವೆ ಎಂಬುದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

Fire accident at Sira Town

535 SRI S. LINGAIAH (Sira).—Will the Minister for Revenue and Agriculture be pleased to state:—

(a) whether it has come to their notice that 16 huts in Jothinagar of Sira Town, were burnt due to fire accident on 7-3-1980;

(b) if so, whether Compensation has been given by the Government to the affected families;

(c) if so, the details thereof ?

SRI S. BANGARAPPA (Minister for Revenue and Agriculture).—

(a) Yes.

(b) Yes.

(c) Compensation has been given to 15 families at Rs. 300/- per head to 14 families and Rs. 275/- for one family. Like this total amount of Rs. 4,475-00 has been distributed.

ಶ್ರೀ ಎಸ್. ಲಿಂಗಯ್ಯ.—ನಷ್ಟ ಸಂಭವಿಸಿರುವುದು ಎಷ್ಟು ಎಂಬುದನ್ನು ಪರಿಶೀಲಿಸಿ, ನೊಂದವರಿಗೆ ಪರಿಹಾರ ಕೊಡುವುದನ್ನು ಸರ್ಕಾರ ಯೋಚಿಸುವುದೇ?

† ಶ್ರೀ ಎಸ್. ಬಂಗಾರಪ್ಪ.—ಒಟ್ಟು ಸುಮಾರು ೯,೦೮೦ ರೂಪಾಯಿಗಳ ನಷ್ಟವುಂಟಾಗಿದೆ ಎಂದು ತಿಳಿಸುವ ಮಾದಿ ನನ್ನ ಹತ್ತಿರವಿದೆ. ನೊಂದವರಿಗೆ ಒಟ್ಟು ಎಷ್ಟು ಪರಿಹಾರ ಕೊಡಬೇಕಾಗುತ್ತದೆನ್ನುವ ಬಗ್ಗೆ record built-up ಪೂರ್ತಿ ಮಾಡಲಾಗಿದೆ. ಅಂದಾಜು ಸಧ್ಯದಲ್ಲೇ ತಯಾರಾಗಲಿದೆ.

ಶ್ರೀ ಎಸ್. ಲಿಂಗಯ್ಯ.—ಈಗ ನೊಂದವರು ಜ್ಯೋತಿನಗರ ಪ್ರದೇಶದಲ್ಲಿ ವಾಸವಾಗಿದ್ದಾರೆ. ಅದು ಸರ್ಕಾರಿ ಜಮೀನು. ಅದುದರಿಂದ, ಅಲ್ಲಿ ನಿವೇಶನ ಹಂಚುವ ಕಾಲದಲ್ಲಿ ಈ ನೊಂದಿರುವವರಿಗೆ ಆದ್ಯತೆ ಮೇರೆಗೆ ಮನೆಯನ್ನು ಕಟ್ಟಲು ನಿವೇಶನವನ್ನು ಕೊಡುವ ವ್ಯವಸ್ಥೆ ಮಾಡುವಿರಾ?

ಶ್ರೀ. ಎಸ್. ಬಂಗಾರಪ್ಪ.—ಜ್ಯೋತಿ ನಗರದಲ್ಲಿ ನಿವೇಶನ ಪಂಚಬೇಕೆನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವೆಂದು ಅವರ ಮಾತಿನಿಂದ ನಾನು ತಿಳಿದುಕೊಂಡಿದ್ದೇನೆ. ಸ್ಥಳೀಯ ಅಧಿಕಾರಿಗಳು ಮತ್ತು ಮುಖಂಡರೆಲ್ಲ ಸೇರಿ ನೊಂದಿರುವವರಿಗೆ ಜ್ಯೋತಿ ನಗರದಲ್ಲೇ ನಿವೇಶನ ಕೊಡಬೇಕೆಂದು ಹೇಳಿದರೆ ಅಲ್ಲೇ ಕೊಡಿಸೋಣ. ಅದಕ್ಕೇನು ನಮ್ಮ ಅಭ್ಯಂತರವಿಲ್ಲ. ಆದರೆ, ಆರ್ಥಿಕ ದೃಷ್ಟಿಯಿಂದ ಮತ್ತು ಮುಂದೆ ಸಂಭವಿಸಬಹುದಾದ ಬೆಂಕಿ ಅನಾಹುತಗಳನ್ನು ತಪ್ಪಿಸುವ ದೃಷ್ಟಿಯಿಂದ ಇದಕ್ಕೂ ಮೊದಲೂ ಒಳ್ಳೆಯ ಜಾಗ ವಿದ್ದರೆ ಅದನ್ನು ಮನೆಕ್ಕೆ ಕೊಡಬಾರದು? ಆದುದರಿಂದ, ತಾವು ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಮುಖಂಡರೊಂದಿಗೆ ಮಾತನಾಡಿ ಒಂದು ತೀರ್ಮಾನಕ್ಕೆ ಬಂದರೆ ಅದನ್ನು ನಾವು ಒಪ್ಪುತ್ತೇವೆ.

ಶ್ರೀ ಎಸ್. ಲಿಂಗಯ್ಯ.—ಇದೇ ಸರಿಯಾದ ಜಾಗವೆಂದು ಅಧಿಕಾರಿಗಳು ತೀರ್ಮಾನ ತೆಗೆದು ಕೊಂಡು, ಅಲ್ಲಿ ನಿವೇಶನಗಳನ್ನು ಹಂಚಲು ಜಿಲ್ಲಾಧಿಕಾರಿಗಳು ಮತ್ತು ಕ್ಷೇತ್ರ ವಿಸ್ತರಣಾಧಿಕಾರಿಗಳು ಏರ್ಪಾಡು ಮಾಡಿದ್ದರು. ಆದರೆ, ಕ್ಷೇತ್ರ ವಿಸ್ತರಣಾಧಿಕಾರಿ ನಿವೇಶನಗಳನ್ನು ಪಂಚುವುದು ಸರಿಯಾದ ದಲ್ಲವೆಂದು ತಾತ್ಕಾಲಿಕ ತಡೆಯಾಜ್ಞೆ ಬಂದಿದೆ ಎಂದು ಹೇಳಲಾಗಿದೆ. ಆದುದರಿಂದ, ಈ ಪ್ರದೇಶವೇ ಎಲ್ಲ ರೀತಿಯಿಂದಲೂ ಸೂಕ್ತವಾಗಿದ್ದು, ನಿವೇಶನಗಳನ್ನು ಪಂಚುವಾಗ ನೊಂದವರಿಗೆ ಆದ್ಯತೆ ಕೊಡ ಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸ್ಥಳೀಯ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರ ಅಭಿಪ್ರಾಯದ ಪ್ರಕಾರ ಅದಕ್ಕೆ ತಡೆಯಾಜ್ಞೆ ಬಂದಿರತಕ್ಕಂಥ ಮಾದಿ ನಮ್ಮ ಮುಂದೆ ಇಲ್ಲ. ಹಾಗೇನಾದರೂ ಇದ್ದರೆ ಅದರ ಬಗ್ಗೆ ನಾನು ವಿಚಾರಣೆ ಮಾಡಿಸುತ್ತೇನೆ. ಈ ವಿಚಾರದಲ್ಲಿ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರಾದ ಲಿಂಗಯ್ಯನವರು ಅವರ ಅಭಿಪ್ರಾಯವನ್ನು ಕೊಡಲಿ. ಅವರಿಗೆ ನಿವೇಶನ ಕೊಡಿಸೋಣ, ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಈ ವಿಚಾರದಲ್ಲಿ ನಾನೂ ಕೂಡ ಜಿಲ್ಲಾಧಿಕಾರಿ ಯವರಿಗೆ ಈ ವಿಷಯ ತಿಳಿಸುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

QUESTION FOR ANSWER ON THE DAY
(but not taken up)

Land acquired by the City Improvement Board, Gulbarga

366 SRI QUAMARUL ISLAM (Gulbarga).— Will the Minister for Housing and Urban Development be pleased to state:—

(a) the number of acres of land, the City Improvement Board, Gulbarga has acquired till today;